ಮನೆಯೊಳಗೆಲ್ಲ ಸುಮ್ಮನೆ ಅಲೆದಾಡಿ ಹುಡುಕುತ್ತಿದ್ದ. ಏನೂ ಇಲ್ಲ ಎಂದು ಗೊತ್ತಿರುವ ಇಂಡೋಲಿಯಂ ಡಬ್ಬಿಗಳಲ್ಲೇ ಏನಾದರೂ ಇದೆಯೇ ಎಂದು ತಡಕಾಡುತ್ತಿದ್ದ. ತಾನು ತಡಕಾಡುವುದ ನೋಡಿ ಅಮ್ಮ ಏನನ್ನಾದರೂ ಮಾಡಲಿ ಎಂಬ ಉದ್ದೇಶವಿರುವಂತೆ ಭಾಸವಾದರೂ, ಅಮ್ಮ ಮನೆಯಲ್ಲಿಲ್ಲದ ಕ್ಷಣಗಳಲ್ಲೂ ಹಾಗೇ, ಏನೂ ಇಲ್ಲ ಎಂಬ ತನ್ನ ತಿಳಿವಳಿಕೆಯ ಮೀರಿ ಏನೋ ಸಿಕ್ಕಿ ಬಿಡಲಿ ಎಂಬಂತೆ ಹುಡುಕಾಡುತ್ತಿದ್ದ, ಥೇಟ್ ತನ್ನ ಬಾಲ್ಯದೊಳಗಿನ ಹುಡುಕಾಟದಂತೆ. ಏನಾದರೂ ಮಾಡಿಕೊಡು ಎಂದು ತುಟಿಯಂಚಿಗೆ ಬಂದ ಮಾತನ್ನು ಅಮ್ಮನಿಗೆ ಕಷ್ಟ ಆಗುತ್ತದೆ ಎಂಬ ಭಾವನೆ ಮರಳಿ ಗಂಟಲಿನಾಳಕ್ಕೆ ದೂಡುತ್ತಿತ್ತು. ಅದಕ್ಕಿಂತ ಹೆಚ್ಚಾಗಿ ಮೂವ್ವತ್ತೆರಡು ವಯಸ್ಸಿನ ತಾನು ಹೀಗೆ ನಿದ್ರಿಸುತ್ತಾ, ಮೊಬೈಲು ನೋಡುತ್ತಾ ಕಳೆಯುವ ಮಧ್ಯಾಹ್ನಗಳಿಗೆ ಇನ್ನೊಬ್ಬರಿಂದ ಏನನ್ನಾದರೂ ಮಾಡಿಸಿ ತಿನ್ನುವ ಯೋಗ್ಯತೆಯಿಲ್ಲ ಎನ್ನುವ ಒಂದು ಪಶ್ಚಾತ್ತಾಪವೇ ಅವನ ಎಷ್ಟೋ ಬಯಕೆಗಳಿಗೆ ತೊಟ್ಟಿಲಿನಲ್ಲೇ ಗೋರಿ ಕಟ್ಟಿಬಿಡುತ್ತಿತ್ತು. ಹೀಗಿರುವಾಗ ಪಕ್ಕದ ಮನೆಯ ಪುಟ್ಟ ಹುಡುಗ ಮುನ್ನಿ, 'ಮಾಮು ಇದಾನಾ?' ಎಂದು ಕೇಳುತ್ತಾ ತನ್ನನ್ನು ಹುಡುಕಿ ಬರುವ ಇಂಥಾ ಕ್ಷಣಗಳಿಂದಾಗಿ ಅವನ ಸಂಜೆಗಳು ಕೊಂಚ ಸಹ್ಯವಾಗುತ್ತಿದ್ದವು.

ಮುನೀರನಿಗಿಂತ ಹದಿನಾರು ವರ್ಷಗಳಿಗೆ ಚಿಕ್ಕವನು ಮುನ್ನಿ. ಒಂದೂವರೆ ದಶಕದ ಹಿಂದೆ ಆಗಷ್ಟೇ ಮಾತನಾಡುವ ಹಂತಕ್ಕೆ ಬೆಳೆದಿದ್ದ ಮುನ್ನಿಯನ್ನು ಹೇಗೆ ಮಾತಾಡಿಸುವುದೆಂದು ತಿಳಿಯದೇ ಮ್ಯಾಂವ್ ಮ್ಯಾಂವ್ ಎಂದು ಕರೆಯುತ್ತಿದ್ದ ಮುನೀರ. 'ಪಾಪೂ' ಎಂತಲೋ, 'ಓಲೋಲೋ...' ಅಂತಲೋ, 'ಕಂದಾ' ಅಂತಲೋ ಕರೆಯುವವರ ನಡುವೆ, ಅವರೆಲ್ಲರಿಗಿಂತ ಭಿನ್ನವಾಗಿ ಮ್ಯಾಂವ್ ಮ್ಯಾಂವ್ ಎಂದು ಶಬ್ದ ಹೊರಡಿಸುವ ಈ ಮುನೀರ ಪ್ಯಾಂಟು ಶರ್ಟು ತೊಟ್ಟು ಎರಡು ಕಾಲಿನಲ್ಲಿ ನಡೆಯುವ ದಢೂತಿ ಬೆಕ್ಕಿನಂತೆ ಮುನ್ನಿಗೆ ಕಾಣುತ್ತಿದ್ದ. ಆ ವಿಭಿನ್ನತೆಯೇ ಅವನ ಮೇಲೊಂದು ಆಪ್ತ ಪ್ರೀತಿಯನ್ನುಂಟು ಮಾಡಿತ್ತು.

ಈಗ, ಹದಿನಾಲ್ಕು ವರ್ಷಗಳ ಬಳಿಕವೂ ಆ ಪ್ರೀತಿ ಹಾಗೇ ಉಳಿದಿತ್ತು.

'ಮಾಮೂ' ಎನ್ನುತ್ತಾ ಬರುತ್ತಿದ್ದ ಮುನ್ನಿ, ಅದಕ್ಕಾಗಿಯೇ ಕಾದವನಂತೆ ಎದ್ದು ಕೂರುತ್ತಿದ್ದ ಮುನೀರ. ಏನನ್ನೋ ಕಳೆದುಕೊಂಡಂತೆ ಅಕಾರಣವಾಗಿ ಕೊರಗುವ ತನ್ನ ಸಂಜೆಗಳಿಗೆ ಬಣ್ಣ ತುಂಬುವ ಸಾಧ್ಯತೆಯಿದ್ದರೆ ಅದು ಮುನ್ನಿಯ ಮುಗ್ಧ ಮಾತುಗಳಿಗೆ ಮಾತ್ರ ಎಂಬುದು ಮುನೀರನಿಗೂ ಗೊತ್ತಿತ್ತು. ಊರು ಹಾಗೂ ಕಾಡುಗಳೆರಡೂ ಸಂಧಿಸುವ ಹಾದಿಯಲ್ಲಿ ಅವರಿಬ್ಬರೂ ಮಾತಾಡುತ್ತಾ ನಡೆಯುತ್ತಿದ್ದರು. ಮೂವತ್ತೆರಡು ಹಾಗೂ ಹದಿನಾರು ವರ್ಷದವರಿಬ್ಬರು ಗೆಳೆಯರಾಗಿ ನಡೆಯುವ ಈ ವಿಚಿತ್ರ ಸ್ನೇಹದ ಪಯಣದಲ್ಲಿ ಒಮ್ಮೊಮ್ಮೆ ಮುನೀರ ಮುನ್ನಿಯಷ್ಟು ಮುಗ್ಧನಾಗುತ್ತಿದ್ದ. ಮತ್ತೊಮ್ಮೆ ಮುನ್ನಿ ಮುನೀರನಷ್ಟು ಅನುಭವಸ್ಥನಾಗುತ್ತಿದ್ದ. ಒಬ್ಬರ ವಯಸ್ಸನ್ನು ಇನ್ನೊಬ್ಬರು, 'ಒಮ್ಮೆ ಹಾಕಿ ನೋಡುತ್ತೇನೆ' ಎಂದು ಟ್ರಯಲ್ ನೋಡುವ ಹೊಸ ಅಂಗಿಯಂತೆ ಬದಲಾಯಿಸಿಕೊಂಡು ತೊಟ್ಟುಕೊಳ್ಳುತ್ತಿದ್ದರು. ಮುನ್ನಿ, 'ಮಾಮು ನೀನು ಯೂಟ್ಯೂಬ್ ಚಾನಲ್ ಮಾಡು. ನಿಂಗೆ ಕ್ಯಾರಿ ಮಿನಾಟಿ, ಆಶಿಶ್ ಚಂಚಲಾನಿ ಗೊತ್ತಾ? ಅವ್ರು ತಿಂಗಳಿಗೆ ಹತ್ತು ಲಕ್ಷ ದುಡೀತಾರೆ!' ಎನ್ನುತ್ತಿದ್ದ. ಅದಕ್ಕೆ ಮುನೀರ, 'ಸ್ಪೇಸ್ ಸೈನ್ಸ್ ಬಗ್ಗೆ ಒಂದು ಚಾನಲ್ ಮಾಡ್ಬೇಕಂತಿದೀನಿ. ನಂಗೆ ಅಷ್ಟೆಲ್ಲಾ ಏನೂ ಬೇಡ. ತಿಂಗಳಿಗೆ ಹದಿನೈದರಿಂದ ಇಪ್ಪತ್ತು ಸಾವಿರ ಬಂದ್ರೆ ಸಾಕು' ಎನ್ನುತ್ತಿದ್ದ. ಕನಿಷ್ಠ ಕಲ್ಪನೆಯಲ್ಲಿ ಮಾಡುವ ಕಮಾಯಿಯಲ್ಲೂ ಹದಿನೈದು, ಇಪ್ಪತ್ತು ಎಂದು ಅಲ್ಪತೃಪ್ತನಾಗುವ ತನ್ನ ಬಗ್ಗೆ ಅವನಿಗೇ ಆಗಾಗ ಅಚ್ಚರಿಯಾಗುವುದಿದೆ. ಆಗೆಲ್ಲ ಮುನ್ನಿ, 'ಇಲ್ಲ ಮಾಮೂ, ನಾನೇನಾದ್ರೂ ಚಾನಲ್ ಮಾಡಿದ್ರೆ ನಂಗೆ ಮಿನಿಮಮ್ ಒಂದು ಲಕ್ಷ ಬರ್ಲೇಬೇಕು' ಎಂದು ವರ್ತಮಾನ ಜಗತ್ತಿನ ಅಸಲಿ ಜರೂರತ್ತನ್ನು ಅರ್ಥ ಮಾಡಿಸುವಂತೆ ನುಡಿಯುತ್ತಿದ್ದ.

ಊರು, ಕಾಡು, ಸಂಜೆ ಹಾಗೂ ಅಕಾರಣದ ಬೇಸರಗಳೆಲ್ಲ ಬೆರೆಯುವ ಬಿಂದುವೊಂದರಲ್ಲಿ ನಡೆಯುತ್ತಾ ಹೋಗುವ ಈ ಪ್ರಯಾಣ ಮುನೀರನಿಗೆ ಅತ್ಯಂತ ಅಪ್ಯಾಯಮಾನವಾಗಿತ್ತು. ತಾನು ಪಟ್ಟಣದಲ್ಲಿ ಉದ್ಯೋಗದಲ್ಲಿದ್ದ ದಿನಗಳಲ್ಲಿ ಹಳ್ಳಿ ಹಾಗೂ ಅಲ್ಲಿಯ ತಣ್ಣಗಿನ ಬದುಕಿನ ಕುರಿತಾಗಿ ಕಾಣುತ್ತಿದ್ದ ಹಗಲುಗನಸುಗಳ ಪೈಕಿ ಯಾವುದೋ ಒಂದು ನನಸಾದಂತೆ ಭಾಸವಾಗಿ ಅವನು ಖುಷಿ